ಕರ್ನಾಟಕೇತರ ವಿದ್ಯಾರ್ಥಿಗಳಿಗೆ ರೂ. ೧೨,೦೦೦ ಕ್ಯಾಪಿಟೇಷನ್ ಶುಲ್ಕವನ್ನು ವಿಧಿಸಲು ಅನುಮತಿಸಲಾಗಿದೆ.

ಸರ್ಕಾರದಿಂದ ಅನುದಾನ ಪಡೆಯದ ಇಂಜಿನಿಯರಿಂಗ್ ಕಾಲೇಜುಗಳಲ್ಲಿನ ಸೀಟುಗಳಿಗೆ ಸರ್ಕಾರವು ಕ್ಯಾಪಿಟೇಶನ್ ಶುಲ್ಕವನ್ನು ನಿಗದಿ ಮಾಡಿರುವುದಿಲ್ಲ.

ಮೇಲೆ ಹೇಳಿದ ಕ್ಯಾಪಿಟೇಶನ್ ಶುಲ್ಕವಿಲ್ಲದ ಸೀಟುಗಳನ್ನು ಸರ್ಕಾರವು ವಿದ್ಯಾರ್ಥಿಗಳ ಎರಡನೇ ವರ್ಷದ ಪಿ ಯು.ಸಿ.ಯಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತ ಶಾಸ್ತ್ರದಲ್ಲಿ ಗಳಿಸಿರುವ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡುವುದು.

ಕ್ಯಾಪಿಟೇಶನ್ ಶುಲ್ಕವನ್ನು ಐದು ವರ್ಷಗಳ ಅವಧಿಯಲ್ಲಿ ಪೂರ್ತಿಯಾಗಿ ರದ್ದುಗೊಳಿಸಲು ಸರ್ಕಾರ ೧೯೮೧ರಲ್ಲಿ ಒಂದು ಆಜ್ಞೆಯನ್ನು ಹೊರಡಿಸಿದೆ. ಆದರೆ ಕೆಲವು ತಾಂತ್ರಿಕ ಕಾಲೇಜುಗಳ ವ್ಯವಸ್ಥಾಪಕರು ಈ ಆಜ್ಞೆಯನ್ನು ಕರ್ನಾಟಕದ ಶ್ರೇಷ್ಠ ನ್ಯಾಯಾಲಯದಲ್ಲಿ ಪ್ರಶ್ನಿಸಿ ಅದಕ್ಕೆ ತಡೆಯಾಜ್ಞೆಯನ್ನು ತಂದಿದ್ದಾರೆ. ಶ್ರೇಷ್ಠ ನ್ಯಾಯಾಲಯದಲ್ಲಿರುವ ರಿಟ್ ಅರ್ಜಿಗಳು ಇನ್ನೂ ಇತ್ಯರ್ಥವಾಗಿಲ್ಲ.

ಹಾಸನ ಪಟ್ಟಣದ ಶ್ರೀಮತಿ ಶಾಂತಮ್ಮ ಮಹಿಳಾ ಕಾಲೇಜಿನ ವಿಸ್ತೀರ್ಣದ ಬಗ್ಗೆ

ಶ್ರೀ ಕೆ.ಎಚ್. ಹನುಮೇಗೌಡ (ಹಾಸನ)—

೨೦ (೪೯) ವಿದ್ಯಾಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

(ಅ) ಹಾಸನ ಪಟ್ಟಣದ ದುಲೆನಾಡು ತಾಂತ್ರಿಕ ಶಿಕ್ಷಣ ಸಂಸ್ಥೆಯವರು ನಡೆಸುತ್ತಿರುವ ಶ್ರೀಮತಿ ಶಾಂತಮ್ಮ ಮಹಿಳಾ ಕಾಲೇಜಿನ ಆವರಣದ ಒಟ್ಟು ವಿಸ್ತೀರ್ಣವೆಷ್ಟು;

(ಆ) ಈ ಆವರಣದಲ್ಲಿ ಎಷ್ಟು ಮಳಿಗೆಗಳನ್ನು ಕಟ್ಟಿಸಿ ಬಾಡಿಗೆಗೆ ಕೊಡಲಾಗಿದೆ. ಇದರಿಂದ ತಿಂಗಳು ಒಂದಕ್ಕೆ ಎಷ್ಟು ಬಾಡಿಗೆ ಬರುತ್ತದೆ,

(ಇ) ಈ ಆವರಣದಲ್ಲಿ ಕಟ್ಟಿದ ಕಟ್ಟಿಸಿ ಯಾವ ಯಾವ ಆಫೀಸುಗಳಿಗೆ ಬಾಡಿಗೆಗೆ ಕೊಡಲಾಗಿದೆ. ಇದರಿಂದ ತಿಂಗಳು ಒಂದಕ್ಕೆ ಎಷ್ಟು ಬಾಡಿಗೆ ಬರುತ್ತದೆ. ವಿವರ ಕೊಡಿ,

(ಈ) ಈ ಆವರಣದಲ್ಲಿ ಕಾಲೇಜು ನಡೆಯುತ್ತಿರುವ ಬಿಲ್ಡಿಂಗ್‌ನ ವಿಸ್ತೀರ್ಣ ಎಷ್ಟು ಚದರ ಗಜಗಳಾಗುತ್ತದೆ ವಿವರ ಕೊಡಿ ?

ಶ್ರೀ ಜಿ.ಬಿ. ಶಂಕರರಾವ್(ವಿದ್ಯಾ ಮಂತ್ರಿಗಳು).—

(ಅ) ಒಟ್ಟು ೧.೧೦,೬೫೦ ಚದರ ಅಡಿಗಳು.

(ಆ) ೨೭ ಮಳಿಗೆಗಳು ಒಟ್ಟು ಬಾಡಿಗೆ ರೂ. ೬,೮೦೦ ತಿಂಗಳು ಒಂದಕ್ಕೆ.

(ಇ) ಈ ಆವರಣದಲ್ಲಿ ಕಟ್ಟಿಸಿದ ಕಟ್ಟಡದಲ್ಲಿ ಬ್ಯಾಂಕುಗಳಿಗೆ, ಪಕ್ಕಿಲರ ಕಛೇರಿಗಳಿಗೆ, ಪಲ್ಲಿನ ಆಸ್ಪತ್ರೆಗೆ, ಸ್ಟುಡಿಯೋ, ಆಡಿಟರ್‌ರವರ ಕಛೇರಿ, ಪಾಚಿನ ತಿಂಗಡಿ ಹಾಗೂ ಫೈನಾನ್ಸ್ ಕಾರ್ಪೊರೇಶನ್‌ಗಳಿಗೆ ಬಾಡಿಗೆ ಕೊಡಲಾಗಿದೆ. ಇದರಿಂದ ತಿಂಗಳ ಒಂದಕ್ಕೆ ಒಟ್ಟು ರೂ. ೭,೭೬೫-೦೦ ಬಾಡಿಗೆ ಬರುತ್ತದೆ

(ಈ) ೧೫,೧೧೦ ಚದರ ಗಜಗಳು.

೧೮೫೭ರ ಬಂಡಾಯದಲ್ಲಿ ಭಾಗವಹಿಸಿದ ಸ್ವಾತಂತ್ರ್ಯ ಸಂಗ್ರಾಮದ ಸಂಬಂಧಿಗಳಿಗೆ ಸಹಾಯ ಧನ ನೀಡುವ ಬಗ್ಗೆ.

ಶ್ರೀ ಎಂ.ಎಸ್. ಪಾಟೀಲ್ (ಸಂಕೇಶ್ವರ) ಮತ್ತು ಶ್ರೀ ಆರ್.ಸಿ. ಬಾಳೆಕುಂದರಗಿ (ಬೈಲಹೊಂಗಲ)—

೨೧ (೫೯) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.—

(ಅ) ೧೮೫೭ರ ಬಂಡಾಯದಲ್ಲಿ ಭಾಗವಹಿಸಿದ ಸ್ವಾತಂತ್ರ್ಯ ಸಂಗ್ರಾಮದ ಸಂಬಂಧಿಗಳಿಗೆ ಸಹಾಯ ಧನ ಅಥವಾ ಪೆನ್‌ಷಿಡ್ ಕೊಡುವ ಯೋಜನೆ ಸರ್ಕಾರದಲ್ಲಿದೆಯೆ (ವಿವರ ಕೊಡಿ)